ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-4 Issue 4, Jan-Feb, 2023, Pp. 85-91.**
**©*IIMRD*, Mysuru**

IIMRD JOURNALS

**www.iimrd.com**

# ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳಗಾವಿಯ ಪಾತ್ರ

**ದೀಪಾ ಅಂಗಡಿ ಬ* & ಡಾ. ಧನವಂತ ಹಾಜವಗೋಳ****

ಸಂಶೋಧನಾ ವಿದ್ಯಾರ್ಥಿನಿ* & ಮಾರ್ಗದರ್ಶಕರು**

ಡಾ. ಆರ್. ಸಿ. ಹಿರೇಮಠ ಕನ್ನಡ ಅಧ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

***ಸಾರಾಂಶ: (Abstract)***

*"ಗಡಿಯೊಳಗೆ ಬದುಕು, ಗಡಿಯಾಚಗೆ ನೆಲೆ, ಇವುಗಳ ಮಧ್ಯೆ ನಮ್ಮ ನಿಮ್ಮೆಲ್ಲರ ಸಂಸ್ಕೃತಿಯೆಂಬ ಜೀವಸೆಲೆ". ಬದುಕನ್ನು ಕಟ್ಟಿಕೊಳ್ಳಲು ನೆಲ, ಜಲ, ಅಗ್ನಿ, ವಾಯು ಮತ್ತು ಆಕಾಶ ಎಂಬ ಪಂಚಭೂತಗಳು ಹೇಗೆ ಅವಶ್ಯಕವೋ ಹಾಗೇ ಆ ನಾಡಿನ ಭಾಷೆ, ಸಂಸ್ಕೃತಿಯೂ ಅಷ್ಟೇ ಮಹತ್ವದಾಗುತ್ತದೆ. ಕನ್ನಡದ ನೆಲ–ಜಲ, ಭಾಷೆ–ಸಂಸ್ಕೃತಿಗಳನ್ನು ಉಳಿಸಿ ಬೆಳೆಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಅಂತಹ ಜವಾಬ್ದಾರಿಯನ್ನು ಉಳಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸಿದ್ದು ಬೆಳಗಾವಿ. ಅದರಲ್ಲಿ ಮುಖ್ಯವಾಗಿ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೆಳಗಾವಿ ಪಾತ್ರ ಅಗ್ರಮಾನ್ಯವಾಗಿದೆ.*

***ಮುಖ್ಯಪದಗಳು: (Keywords)*** ಸ್ವಾತಂತ್ರ್ಯ ಚಳವಳಿ, ಬೆಳಗಾವಿ, ಹೋರಾಟ, ಸಂಗ್ರಾಮ.

**ಪೀಠಿಕೆ**

'ಸ್ವಾತಂತ್ರ್ಯದ ಬೆಳ್ಳಿ ಚುಕ್ಕಿ' ಎಂದು ಪ್ರಖ್ಯಾತಳಾದ ವೀರರಾಣಿ ಕಿತ್ತೂರು ಚೆನ್ನಮ್ಮ ಬೆಳಗಾವಿ ಜಿಲ್ಲೆಯವರು. ಬೆಳವಡಿ ಮಲ್ಲಮ್ಮ, ಸಂಗೋಳ್ಳಿ ರಾಯಣ್ಣ, ಗಂಗಾಧರರಾವ ದೇಶಪಾಂಡೆ, ಕೇಶವರಾವ ಗೋಖಲೆ, ನಾರಾಯಣರಾವ್ ಜೋಶಿ, ಚನ್ನಪ್ಪ ವಾಲಿ ಮುಂತಾದವರು ಭಾಗವಹಿಸಿದ್ದರು. ಭಾರತೀಯ ಸ್ವಾತಂತ್ರ್ಯ ಹೋರಾಟದ ಇತಿಹಾಸದ ಪುಟಗಳಲ್ಲಿ ಬೆಳಗಾವಿ ಜಿಲ್ಲೆ ಅಗ್ರಸ್ಥಾನವನ್ನು ಪಡೆದಿದೆ. ಹಲಸಿಯ ಕದಂಬರು, ರಾಷ್ಟ್ರಕೂಟರು, ಕಳಚೂರ್ಯರು, ವಿಜಯನಗರದ ಅರಸರು, ದೇವಗಿರಿಯ ಯಾದವರು, ಬಹುಮನಿ ಸುಲ್ತಾನರು, ಆದಿಲಶಾಹಿಗಳು, ಮರಾಠರು ಬೆಳಗಾವಿ ಪ್ರದೇಶವನ್ನು ಆಳಿದ್ದಾರೆ. ಬ್ರಿಟಿಷರ ವಿರುದ್ಧ ಹೋರಾಡಿದಕ್ಕೆ ಈ ನಾಡನ್ನು 'ಗಂಡುಮೆಟ್ಟಿದ ನಾಡು' ಎಂದು ಪ್ರಸಿದ್ಧಿ ಪಡೆದಿದೆ. ಇನ್ನೊಂದು ಹೆಮ್ಮೆಯ ಸಂಗತಿಯೆಂದರೆ ಬೆಳಗಾವಿಯಲ್ಲಿ ನಡೆದ 1924ರ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾಗಿ ಆಗಮಿಸಿದ್ದವರು ಮಹಾತ್ಮಾ ಗಾಂಧೀಜಿ. ಹೀಗಾಗಿ ಕರ್ನಾಟಕ ರಾಜ್ಯ ನಕ್ಷೆಯಲ್ಲಿ ಮಿನುಗುವ ನಕ್ಷತ್ರವೆಂದರೆ ಅದು ಬೆಳಗಾವಿ ಜಿಲ್ಲೆ. ಬ್ರಿಟಿಷರ ವಿರುದ್ಧ ಮೊಟ್ಟ ಮೊದಲು ಧ್ವನಿ ಕೇಳಿ ಬಂದದ್ದು, ಬೆಳಗಾವಿಯ ಕಿತ್ತೂರ ಚನ್ನಮ್ಮನಿಂದಲೇ. ಬ್ರಿಟಿಷರ ಆಡಳಿತದ ವಿರುದ್ಧ ಹೋರಾಡುತ್ತ ಕಡಿಮೆ ಸಮಯದಲ್ಲಿಯೇ ಚನ್ನಮ್ಮನ ಸಂಸ್ಥಾನ ಪತನಗೊಂಡು ಬ್ರಿಟಿಷರ ವಶವಾಯಿತು. ಈ ದುರಂತವೇ ಮುಂದಿನ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿಯ ಸೆಲೆಯಾಯಿತು. ಆ ಸಂದರ್ಭದಲ್ಲಿ ಬೆಳಗಾವಿ–ಕಿತ್ತೂರು ಮಧ್ಯೆ 45ಕಿ.ಮೀ ಅಂತರವಿತ್ತು.

*Please cite this article as: ದೀಪಾ ಬ ಅಂಗಡಿ & ಡಾ. ಧನವಂತ ಹಾಜವಗೋಳ* (2023). ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳಗಾವಿಯ ಪಾತ್ರ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ. 4(4). ಪು. ಸಂ. 85–91.*

ಬೆಳಗಾವಿ ಬ್ರಿಟಿಷರ ಮುಖ್ಯ ಕೇಂದ್ರವಾಗಿದ್ದ ಕಾರಣ ಬೆಳಗಾವಿಯ ಸುತ್ತಮುತ್ತಲಿನ ಪ್ರದೇಶಗಳನ್ನು ಬ್ರಿಟಿಷರು ಹಗಲಿರುಳು ಎನ್ನದೇ ವಶಪಡಿಸಿಕೊಳ್ಳುತ್ತ ಹೋದರು. ಕಿತ್ತೂರಿನ ಪತನ, ಚನ್ನಮ್ಮಳ ಬಂಧನ, ರಾಯಣ್ಣನ ಗಲ್ಲು ಶಿಕ್ಷೆ. ಇವುಗಳನ್ನು ಕಣ್ಣಾರೆ ಕಂಡ ಸಾರ್ವಜನಿಕರು ಮೌನವಾಗಿ ಬ್ರಿಟಿಷರ ವಿರುದ್ಧ ಹೋರಾಟಲು ಅಸ್ತ್ರಗಳನ್ನು ಅಣಿಗೊಳಿಸಲು ಸುರುಮಾಡಿದರು. ಸ್ವಾತಂತ್ರ್ಯ ಸಂಗ್ರಾಮಕ್ಕೆ ಬೆಳಗಾವಿಯ ನೆಲ ಬದ್ಧವಾಗಿತ್ತು.

ಕ್ರಿ.ಶ. 1890ರಲ್ಲಿ ಸ್ವಾಮಿ ವಿವೇಕಾನಂದರು ಬೆಳಗಾವಿಗೆ ಬಂದು ಉಪನ್ಯಾಸ ನೀಡಿದ್ದರಿಂದ ಜನರಲ್ಲಿ ಧೈರ್ಯ, ಸ್ಥೈರ್ಯ ಮತ್ತು ಆತ್ಮವಿಶ್ವಾಸವನ್ನು ಗಟ್ಟಿಗೊಳಿಸಲು ಸಾಧ್ಯವಾಯಿತು. ರಾಷ್ಟ್ರಪ್ರೇಮದ ಕುರಿತು ಮಾಡಿದ ಭಾಷಣ ಜನರಲ್ಲಿ ರಾಷ್ಟ್ರ ಪ್ರಜ್ಞೆಯನ್ನೇ ಮೂಡಿಸಿತು. ಭಯವನ್ನು ದೂರಮಾಡಿ ಪ್ರತಿ ಮನೆಯಲ್ಲೂ ಸ್ವಾತಂತ್ರ್ಯದ ಕಿಚ್ಚನ್ನು ಹಚ್ಚಿತು. ಬೆಳಗಾವಿಯಲ್ಲಿ ಬ್ರಿಟಿಷರು ಮಿಲಿಟರಿಗಳನ್ನು ಸ್ಥಾಪಿಸಿದರು. ಆ ಸಂದರ್ಭದಲ್ಲಿ ಕ್ರಿ.ಶ.1857ರಲ್ಲಿ ಬ್ರಿಟಿಷರ ಸೈನ್ಯದಲ್ಲಿದ್ದ ಐದು ಜನ ಸೈನಿಕರು ಬಂಡಾಯವೆದ್ದರು.[1] ಆಗ ಅವರನ್ನು ವಿಚಾರಿಸಲೆಂದು ಕರೆದು ಆ ಸೈನಿಕರನ್ನು ಗಲ್ಲಿಗೇರಿಸಲಾಯಿತು. ಈ ವಿಷಯ ಅರಿತ ಜನರು ಭಯವನ್ನೇ ಬಿಟ್ಟು ಬಂಡಾಯ, ಪ್ರತಿಭಟನೆಯನ್ನು ಹತ್ತಿಕ್ಕುವುದೇ ನಮ್ಮೆಲ್ಲರ ಪ್ರತಿಜ್ಞೆಯೆಂದು ಸ್ಪಷ್ಟಪಡಿಸಿದರು. ಈ ಸಂದರ್ಭದಲ್ಲಿಯೇ ಬೆಳಗಾವಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬ್ರಿಟಿಷರ ವಿರುದ್ಧ ಬಂಡಾಯ ಸಾರುತ್ತಿದ್ದಾಗ ಅವರನ್ನು ಬಂಧಿಸಿ, ಮರಣದಂಡನೆಗೆ ಗುರಿ ಪಡಿಸಿದರು.

ದೇಶದ ಇತಿಹಾಸದಲ್ಲಿಯೇ ಮಹತ್ವದ ಘಟ್ಟವೆಂದರೆ ಕ್ರಿ.ಶ. 1885ರಲ್ಲಿ ಕಾಂಗ್ರೆಸ್ ಪಕ್ಷದ ಸ್ಥಾಪನೆಯಾದದ್ದು. ಇದರ ಮೊದಲ ಸಭೆ ನಡೆದದ್ದು ಮುಂಬೈನಲ್ಲಿ. ಈ ವೇದಿಕೆ ಸುರುವಾಗಿದ್ದೆ ಭಾರತಕ್ಕೆ ಸ್ವಾತಂತ್ರ್ಯವನ್ನು ತರಬೇಕೆಂಬ ಮಹಾದಾಸೆಯಿಂದ. ಈ ಸಭೆಗೆ ಎಲ್ಲ ಕಡೆಗಳಿಂದಲೂ ಜನರು ಆಗಮಿಸುತ್ತಿದ್ದರೆ ಬೆಳಗಾವಿಯಿಂದ ಭಾವೂ ಸಾಹೇಬ ಭಾಟೆ ಎಂಬುವವರು ಭಾಗವಹಿಸಿದ್ದರು. ಇವರ ಜೊತೆಗೆ ವಿಷ್ಣುವಂತ ನಾತೂ, ವಕೀಲರಾದ ಛತ್ರೆ, ಭಾವು ಸಾಹೇಬ ದೇಶಪಾಂಡೆ ಮುಂತಾದವರು ಭಾಗವಹಿಸಿದರು. ಜನರಲ್ಲಿ ರಾಷ್ಟ್ರೀಯ ಮನೋಭಾವನೆ ಮೂಡುವಷ್ಟರಲ್ಲಿ ಬೆಳಗಾವಿ ಬ್ರಿಟಿಷರ ವಿರುದ್ದ ಹೋರಾಡಲು ಸಿದ್ಧತೆಯನ್ನು ನಡೆಸುತ್ತಿತ್ತು. ಅದೇ ಸಂದರ್ಭದಲ್ಲಿ ಬೆಳಗಾವಿ ಸ್ವಾತಂತ್ರ್ಯ ಹೋರಾಟಗಾರರ ಕೇಂದ್ರಸ್ಥಳವಾಗಿ ನಿರ್ಮಾಣಗೊಳ್ಳತೊಡಗಿತು. ಇನ್ನೊಂದು ಮಹತ್ವದ ಘಟ್ಟವೆಂದರೆ ಬ್ರಿಟಿಷರ ವಿರುದ್ಧ ದೇಶದಲ್ಲಿಯೇ ಮೊಟ್ಟ ಮೊದಲ ಬಾರಿಗೆ ರೈತರ ಸಾರ್ವಜನಿಕ ಪ್ರತಿಭಟನೆ ನಡೆದದ್ದು ಬೆಳಗಾವಿಯಲ್ಲಿ. ಈ ಘಟನೆಯೇ ಸ್ವಾತಂತ್ರ್ಯ ಸಂಗ್ರಾಮದ ಇತಿಹಾಸದಲ್ಲಿ ಮಹತ್ವದ ಘಟನೆಯಾಗಿದೆ. ಕ್ರಿ.ಶ.1892ರಲ್ಲಿ ಬ್ರಿಟಿಷರು ಅರಣ್ಯ ಕಾಯ್ದೆಯನ್ನು ತಂದಾಗ ಇದರ ವಿರುದ್ಧ ಬೆಳಗಾವಿ ನಗರದಲ್ಲಿ ಸುಮಾರು 6000ಕ್ಕಿಂತ ಹೆಚ್ಚಿನ ರೈತರು ಶೇಖ್ಕರಿ ಮೇಳಾ ನಡೆಸಿ ತಮ್ಮ ಪ್ರತಿಭಟನೆಯನ್ನು ಸೂಚಿಸಿದರು.[2] ಬೆಳಗಾವಿಯ ಸ್ವಾತಂತ್ರ್ಯ ಹೋರಾಟಕ್ಕೆ ಸಹಕರಿಸಿದವರೆಂದರೆ ರಾಷ್ಟ್ರೀಯ ಮಹಾನಾಯಕರು. ಅವರ ಸ್ಫೂರ್ತಿ, ಪ್ರೋತ್ಸಾಹ, ಮಾರ್ಗದರ್ಶನ ಸಿಕ್ಕಿದ್ದೆ ವಿಶೇಷ. ಅವರೆದಂರೆ ಲೋಕಮಾನ್ಯ ಬಾಲಗಂಗಾಧರ ತಿಲಕರು ಮತ್ತು ಮಹಾತ್ಮ ಗಾಂಧೀಜಿಯವರು. ಬೆಳಗಾವಿ ಪ್ರದೇಶದ ಜನರ ಶೌರ್ಯ, ಶಿಸ್ತು, ಆಸಕ್ತಿಯಂತಹ ಗುಣಗಳನ್ನು ತಿಳಿದ ಈ ಮಹಾನ್ ನಾಯಕರು ಬೆಳಗಾವಿಯಲ್ಲಿ ಹಲವಾರು ಸ್ವಾತಂತ್ರ್ಯ ಹೋರಾಟಕ್ಕೆ ಬೇಕಾದ ಕಾರ್ಯಕ್ರಮಗಳನ್ನು, ಸಭೆಗಳನ್ನು ಹಮ್ಮಿಕೊಂಡರು. ಇದರ ಜೊತೆ ಜೊತೆಗೆ ಬೆಳಗಾವಿಯೂ ಸಾಂಸ್ಕೃತಿಕವಾಗಿಯೂ ಬದಲಾವಣೆಯನ್ನು ಕಾಣತೊಡಗಿತು.

1905ರಲ್ಲಿ ಬೆಳಗಾವಿಯ ಸ್ವಾತಂತ್ರ್ಯ ಹೋರಾಟಗಾರರಿಂದ ನಗರಗಳಲ್ಲಿ ಸಾರ್ವಜನಿಕವಾಗಿ ಹೋಳಿ ಆಚರಣೆಯನ್ನು ಗಂಗಾಧರರಾವ ದೇಶಪಾಂಡೆಯವರ ನೇತೃತ್ವದಲ್ಲಿ ಮೊಟ್ಟಮೊದಲು ಆರಂಭಿಸಲಾಯಿತು.[3] ಇದರಿಂದ ಸಾಮಾಜಿಕ ಜೀವನದಲ್ಲಿ ಸಂಘಟನೆ, ಸಾಮರಸ್ಯ ಉಂಟಾಗಲು ಕಾರಣವಾಯಿತು. ಇದೇ ಸಂದರ್ಭದಲ್ಲಿ 1905ರಲ್ಲಿ ಲೋಕಮಾನ್ಯ ತಿಳಕರು ಬೆಳಗಾವಿಗೆ ಆಗಮಿಸಿ ಸಾರ್ವಜನಿಕ ಗಣೇಶೋತ್ಸವದ ಆಚರಣೆಗೆ ಅಸ್ತು ನೀಡಿದರು. ಇದರಿಂದ ಮೊದಲ ಬಾರಿಗೆ ಬೆಳಗಾವಿಯ ಮಾರ್ಕೆಟಿನ ಝುಂಡಾ ಚೌಕ ಪ್ರದೇಶದಲ್ಲಿ ಶ್ರೀ.ಎಸ್.ವಿ.ಪಾಟ್ನೇಕರ ಎಂಬುವವರ ಅಂಗಡಿಯಲ್ಲಿ ಗಣೇಶನ ಸ್ಥಾಪನೆಯನ್ನು ತಿಲಕರಿಂದ ಮಾಡಿಸಲಾಯಿತು. ಈ ಸಂದರ್ಭದಲ್ಲಿ ಶ್ರೀ.ಎಸ್.ವಿ.ಪಾಟ್ನೇಕರ, ಶ್ರೀ ಸಿದ್ಧಣ್ಣವರ, ಶ್ರೀ.ಬಿ.ಎಲ್.ಫಸಾರಿ, ಶ್ರೀ ಪ್ರಭಾಕರ ಕಲಘಟಗಿ ಮುಂತಾದವರು ಗಣೇಶ ಮೂರ್ತಿ ಪ್ರತಿಷ್ಠಾಪಿಸಲು ಅನುವು ಮಾಡಿಕೊಟ್ಟರು.[4] ಇದರ ಮುಖ್ಯ ಉದ್ದೇಶವೆಂದರೆ ಧಾರ್ಮಿಕ ಆಚರಣೆಗಳ ಮೂಲಕ ಜನರೆಲ್ಲ ಒಂದೆಡೆ ಸೇರಿ ಸ್ವಾತಂತ್ರ್ಯ ಹೋರಾಟದ ಕುರಿತು ಚರ್ಚೆಗಳನ್ನು ನಡೆಸುವುದಾಗಿತ್ತು. ಬೆಳಗಾವಿಯಲ್ಲಿ ಸಾಮಾಜಿಕವಾಗಿ, ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಮತ್ತು ಆರ್ಥಿಕತೆಯ ಬೆಳವಣಿಗೆಯನ್ನು ಕಾಣತೊಡಗಿತು.

ಲೋಕಮಾನ್ಯ ತಿಲಕರು ನಾಲ್ಕುಸೂತ್ರ ಚಳುವಳಿಯ ಹರಿಕಾರರಾಗಿ ಪುಣೆಯಲ್ಲಿ ತೀವ್ರವಾದ ಹೋರಾಟವನ್ನು ಆರಂಭಿಸಿದ್ದರು. ಆ ನಾಲ್ಕುಸೂತ್ರಗಳೆಂದರೆ ಸ್ವದೇಶಿ ಪ್ರಚಾರ, ವಿದೇಶಿ ಬಹಿಷ್ಕಾರ, ರಾಷ್ಟ್ರೀಯ ಶಿಕ್ಷಣ ಮತ್ತು ಸ್ವಾರಾಜ್ಯ ಬೇಡಿಕೆ. ಈ ಹೋರಾಟ ಪುಣೆಯ ನಂತರ ಹೆಚ್ಚು ಪ್ರಬಲವಾಗಿ ಕಂಡದ್ದು ಬೆಳಗಾವಿಯಲ್ಲಿ. ಇದಕ್ಕೆ ಮುಖ್ಯ 3 ಕಾರಣಗಳೆಂದರೆ;

1. ಕರ್ನಾಟಕ–ಮಹಾರಾಷ್ಟದಲ್ಲಿನ ಸಾಂಸ್ಕೃತಿಕ ಸಂಬಂಧ 2. ಬೆಳಗಾವಿ–ಪುಣಾ ನಗರಗಳ ನಡುವಿನ ಕಡಿಮೆ ಅಂತರ 3. ಬೆಳಗಾವಿ ಜನರ ಸಂಘಟಿತ ಹೋರಾಟದಿಂದ. ಹೀಗಾಗಿ ತಿಳಕರ ಈ ನಾಲ್ಕುಸೂತ್ರ ಚಳುವಳಿಗಳಲ್ಲಿ ಮಹತ್ವವಾದವುಗಳನ್ನು ಪ್ರಾರಂಭಿಸಲು ನಿರ್ಧರಿಸಲಾಯಿತು. ಕ್ರಿ.ಶ. 1907ರಲ್ಲಿ ಬೆಳಗಾವಿಯ ಮಾರುತಿ ಗಲ್ಲಿಯಲ್ಲಿ ಬಾವೂಸಾಹೇಬ ಭಾಟೆಯವರು ವಕೀಲರ ಮನೆಯಲ್ಲಿ ಮೊದಲ ಬಾರಿಗೆ ರಾಷ್ಟ್ರೀಯ ಶಾಲೆಯನ್ನು ಪ್ರಾರಂಭಿಸಿದರು. ಈ ಶಾಲೆಗೆ ಗಣೇಶ ವಿದ್ಯಾಲಯವೆಂದು ಕರೆಯಲಾಯಿತು. ಸುಮಾರು 70 ವಿದ್ಯಾರ್ಥಿಗಳ ಮೂಲಕ ಶಾಲೆ ಪ್ರಾರಂಭವಾಗಿದ್ದರು ಹೆಚ್ಚು ದಿನಗಳ ಕಾಲ ಉಳಿಯಲಿಲ್ಲ. ಬ್ರಿಟಿಷರ ದೌರ್ಜನ್ಯದಿಂದಾಗಿ ಕ್ರಿ.ಶ. 1910ರಲ್ಲಿ ಶಾಲೆಗಳನ್ನು ಬಲವಂತದಿಂದ ಮುಚ್ಚುವಂತಾಯಿತು.

ಸ್ವಾತಂತ್ರ್ಯ ಹೋರಾಟಗಾರರಿಗೆ ಮುಖ್ಯಸ್ಥಳವಾಗಿ ಕಂಡದ್ದು ಬೆಳಗಾವಿ. ಇದರಿಂದಾಗಿ ಅಲ್ಲಿ ಹೋರಾಟಗಾರರ ಸಂಖ್ಯೆಯೂ ಕೂಡ ಅಧಿಕವಾಯಿತು. ಅವರಲ್ಲಿ ಪ್ರಮುಖ ಹೋರಾಟಗರರಾದ ಗಂಗಾರಾವ್ ದೇಶಪಾಂಡೆಯವರು ಬೆಳಗಾವಿ ನಗರದಲ್ಲಿ ಸ್ವದೇಶಿ ವಸ್ತುಭಂಡಾರವನ್ನು ಸ್ಥಾಪಿಸಿ, ದೇಶಿವಸ್ತುಗಳನ್ನು ತಯಾರಿಸಿ ಮಾರಾಟ ಮಾಡತೊಡಗಿದರು. ಚರಕದಿಂದ ನೇಯಲಪಟ್ಟ ಬಟ್ಟೆಗಳನ್ನು ಇದರ ಮೂಲಕ ಮಾರಾಟಮಾಡಿದರು. ನಂತರದಲ್ಲಿ ಬೆಳಗಾವಿಯಲ್ಲಿ ಬಾಲಗಂಗಾಧರ ತಿಳಕರ ತೀವ್ರಗಾಮಿಪಂಥ, ಕ್ರಾಂತಿಕಾರಿಗಳ ಗುಪ್ತಸಂಸ್ಥೆ, ಗುಪ್ತಚಾರರ ತಂಡಗಳು, ಮದ್ದು, ಬಾಂಬು ತಯಾರಿಕೆ ಹಾಗೂ ಮುಖ್ಯವಾಗಿ ಬೆಳಗಾವಿಯಲ್ಲಿ ಹೋಮ್‌ರೂಲ್ ಲೀಗ್ ಸ್ಥಾಪನೆ ಮಾಡಿದರು. ಇವೆಲ್ಲದರ ಪ್ರತೀಕವಾಗಿ ತಿಳಕರ ಸ್ವರಾಜ್ಯ ಘೋಷಣೆಯು ಬೆಳಗಾವಿಯ ಮೂಲಕವೇ ಸುರುವಾಯಿತು. ತಿಳಕರು ತಮ್ಮ

ಭಾಷಣದಲ್ಲಿ 'ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು, ನಾನು ಅದನ್ನು ಪಡೆದೇ ತಿರುತ್ತೇನೆ' ಎಂಬ ಸಂದೇಶ ಹೋರಾಟಗಾರರಿಗೆ ಸ್ಥೈರ್ಯ ಮತ್ತು ಸ್ಫೂರ್ತಿಯನ್ನು ನೀಡಿತು.

ಇನ್ನೊಂದು ಅಚ್ಚರಿಯ ವಿಷಯವೆಂದರೆ ತಿಳಕರು ಹೋರಡಿಸುತ್ತಿದ್ದ ಕೇಸರಿ ಪತ್ರಿಕೆ ಮರಾಠಿಯಲ್ಲಿದ್ದರು, ಮರಾಠಿ ಓದಲು ಬಾರದ ಜನರು ಅವರ ಮೇಲಿನ ಅಭಿಮಾನಕ್ಕೆ ಪತ್ರಿಕೆಯನ್ನು ಕೊಂಡು ಬೇರೆವರಿಂದ ಅರ್ಥೈಹಿಸಿಕೊಂಡು ಸ್ಫೂರ್ತಿಯನ್ನು ಪಡೆಯುತ್ತಿದ್ದರು. ಜನರ ಮಧ್ಯೆ ಪ್ರೀತಿ, ವಿಶ್ವಾಸ ಬೆಳೆದಂತೆ ಜನರಲ್ಲಿ ಹೋರಾಟದ ಕಿಚ್ಚು ಹೆಚ್ಚಾಗ ತೊಡಗಿತು.

ಬೆಳಗಾವಿಯಲ್ಲಿ ಹೋರಾಟಕ್ಕೆ ಹೊಸರೂಪ ಪಡೆದದ್ದೇ ಅಸಹಕಾರ ಚಳುವಳಿ. ಇದು ಬೆಳಗಾವಿ ಮತ್ತು ಇತರ ಜಿಲ್ಲೆಗಳಲ್ಲಿಯೂ ದೇಶದ ಉದ್ದಗಲಕ್ಕೂ ಪ್ರಬಲವಾಗಿ ಮುಂದುವರೆದಿತ್ತು. ಪ್ರತಿ ಗ್ರಾಮ, ನಗರ, ಊರುಗಳಲ್ಲಿಯೂ ಸರ್ಕಾರದ ವಿರುದ್ಧ ಪ್ರತಿಭಟನೆಗಳು ನಡೆದವು. ಶಿಕ್ಷಕರು, ವಿದ್ಯಾರ್ಥಿಗಳು, ವಕೀಲರು, ವೈದ್ಯರು ಸರ್ಕಾರಿ ನೌಕರರು ತಮ್ಮ ತಮ್ಮ ಉದ್ಯೋಗಗಳಿಗೆ ರಾಜೀನಾಮೆ ನೀಡಿ ಚಳುವಳಿಗಳಲ್ಲಿ ಭಾಗವಹಿಸಿದರು. ಇದರಲ್ಲಿ ಪ್ರಮುಖರಾದ ಗಂಗಧರರಾವ ದೇಶಪಾಂಡೆ, ಕೃಷ್ಣರಾವ ಕರಗುಪ್ಪಿ, ಧೋಂಡೋ ಕುಲಕರ್ಣಿ, ವೆಂಕಣ್ಣ ನಗರ, ವೆಂಕಟರಾವ್ ಜಾಲಿಹಾಳ, ದಯಾನಂದ ಅರಳಿಕಟ್ಟಿ ಮೊದಲಾದವರು ದೇಶಕಾರ್ಯಕೋಸ್ಕರ ಹೋರಾಡಲು ಸಿದ್ಧರಾದರು. ಅಸಹಕಾರ ಚಳುವಳಿಗೆ ಕರೆ ನೀಡಿದ ಗಾಂಧೀಜಿಯವರು ಬೆಳಗಾವಿಗೆ ಬಂದು ಭಾಷಣ ಮಾಡಿದ್ದು ಜನರಲ್ಲಿ ಸಂಚಲತನವನ್ನು ಉಂಟುಮಾಡಿತು. ಅಷ್ಟೇ ಅಲ್ಲದೇ ಗಾಂಧೀಜಿಯವರೊಂದಿಗೆ ಶೌಕತ ಅಲಿ, ಮಹಮ್ಮದ ಅಲಿ, ಡಾರೇಚಲು, ರವೀಂದ್ರನಾಥ ಟಾಗೋರ, ಲಾಲಾ ಲಜಪತರಾಯ ಮುಂತಾದವರೆಲ್ಲರೂ ಬೆಳಗಾವಿಗೆ ಬಂದು ಹೋರಾಟಕ್ಕೆ ಅಣಿಯಾದರು.

ಅಸಹಕಾರ ಚಳುವಳಿಯು ಬೆಳಗಾವಿಯಲ್ಲಿ ದಿನದಿಂದ ದಿನಕ್ಕೆ ಉಗ್ರರೂಪವನ್ನೇ ತಾಳಿತು. ಜನರಲ್ಲಿ ಬದಲಾವಣೆಯುಂಟಾಗಿ ಜನರು ವಿದೇಶಿ ಬಟ್ಟೆಗಳನ್ನು ವಸ್ತುಗಳನ್ನು ಬಹಿಷ್ಕರಿಸಿದರು. ಸ್ವದೇಶಿ ವಸ್ತುಗಳನ್ನು ಬಟ್ಟೆಗಳನ್ನು ತಯಾರು ಮಾಡತೊಡಗಿದರು. ಇದರಿಂದ ಸರ್ಕಾರ ಚಳುವಳಿಯ ಮುಖಂಡರನ್ನು ಬಂಧಿಸತೊಡಗಿದರು. ಅವರಲ್ಲಿ ದತ್ತಾತ್ರಯ ಮಜಲಿ, ಕೇಶವರಾವ ಗೋಖಲೆ, ನಾರಾಯಣರಾವ್ ಜೋಶಿ, ಶಿವರಾಮ ಕೊಪ್ಪಳ, ಧೋಂಡೋ ರಜಾರಾಮ ಠಾಕೂರ, ಬಾಬುರಾವ ಠಾಕೂರ ಮೊದಲಾದವರನ್ನು ಬಂಧಿಸಿ ಶಿಕ್ಷೆ ವಿಧಿಸಿದರು. ಇದರಲ್ಲಿ ಅತಿ ಹೆಚ್ಚು ಜನರು ಜೈಲುವಾಸಕ್ಕೆ ಸೆರೆಯಾದವರೆಂದರೆ ಬೆಳಗಾವಿ ಜಿಲ್ಲೆಯವರು.

1921 ರಲ್ಲಿ ಅಸಹಕಾರ ಚಳುವಳಿಯ ಸಂದರ್ಭದಲ್ಲಿ ಬೆಳಗಾವಿಯಲ್ಲಿ ಎರಡು ಮಹತ್ವದ ಸಂಸ್ಥೆಗಳು ಪ್ರಾರಂಭವಾದವು. ಬಾಬಾ ಸಾಹೇಬ ಸೋಮಣ್ಣ ಅವರು 'ರಾಷ್ಟ್ರೀಯ ಪ್ರೌಢಶಾಲೆ' ಮತ್ತು 'ಸ್ವರಾಜ್ಯ ಆಶ್ರಮ'ಗಳನ್ನು ಸ್ಥಾಪಿಸುವುದರ ಮೂಲಕ ಬೆಳಗಾವಿಯಲ್ಲಿ ಪ್ರಮುಖ ಬದಲಾವಣೆಗೆ ಕಾರಣರಾದವರು.[5]

ಸ್ವಾತಂತ್ರ್ಯ ಹೋರಾಟಕ್ಕೆ ಐತಿಹಾಸಿಕ ಮಹತ್ವ ಬಂದದ್ದೆ 1924ರಲ್ಲಿ ಬೆಳಗಾವಿಯಲ್ಲಿ ನಡೆದ ಮೊದಲ ರಾಷ್ಟ್ರೀಯ ಕಾಂಗ್ರೆಸ್‌ನ ಅಧಿವೇಶನ. ಇದು ಕರ್ನಾಟಕದಲ್ಲಿ ಸ್ವಾತಂತ್ರ ಪೂರ್ವದಲ್ಲಿ ನಡೆದ ಮೊಟ್ಟ ಮೊದಲ ಕಾಂಗ್ರೆಸ್ ಅಧಿವೇಶನ ಎಂಬ ಹೆಗ್ಗಳಿಕೆಯನ್ನು ಪಡೆಯಿತು. 1924ರ ಡಿಸೆಂಬರ್ 26, 27 ಮತ್ತು 28ರಂದು 3 ದಿನಗಳವರೆಗೆ 39ನೆಯ ಕಾಂಗ್ರೆಸ್ ಅಧಿವೇಶನ ಬೆಳಗಾವಿಗೆ ಹೊಸರೂಪವನ್ನೇ ತಂದುಕೊಟ್ಟಿತು.

ಇದರಿಂದ ಹಲವಾರು ಮಹತ್ವದ ಭಾಷಣಗಳು, ಘೋಷಣೆಗಳು, ನಿರ್ಣಯಗಳು, ಕಲೆ, ಭಾಷೆ, ಸಂಸ್ಕೃತಿ, ಸಂಗೀತದಂತಹ ಪ್ರದರ್ಶನಗಳು ಹಾಗೂ ಸಾಹಿತಿಗಳ ಕೃತಿ ಬಿಡುಗಡೆ ಕಾರ್ಯಕ್ರಮಗಳು ಕೂಡ ಜರುಗಿದವು. ಈ ಅಧಿವೇಶನದ ಮೂಲಕ ಮಹಾತ್ಮ ಗಾಂಧೀಜಿಯವರು ಅಖಂಡ ಭಾರತದಲ್ಲಿ ಪೂರ್ಣ ಪ್ರಮಾಣದ ನಾಯಕರಾಗಿ ಕಂಡುಬಂದರು. ಈ ಅಧಿವೇಶನದಿಂದ ಸ್ವಾತಂತ್ರ್ಯ ಹೋರಾಟಗಾರರಲ್ಲಿದ್ದ ಗುಂಪುಗಾರಿಕೆ ಮಾಯವಾಗಿ ಸಮಾನತೆಯನ್ನು ಸಾಧಿಸಿದರು. ಮೇಲು–ಕೀಳು, ಶ್ರೀಮಂತ–ಬಡವ ಅನ್ನದೇ ಬ್ರಾಹ್ಮಣ–ಬ್ರಾಹ್ಮಣೇತರು, ದೇಶಿಯ ಸಂಸ್ಥಾನಗಳು, ರಾಷ್ಟ್ರೀಯವಾದಿಗಳು ಮುಂತಾದವರೆಲ್ಲಾ ಒಂದೇ ಕಡೆ ಸೇರಿ ವೇದಿಕೆಯಲ್ಲಿ ಭಾಗವಹಿಸಿ ಚರ್ಚೆಗಳನ್ನು ನಡೆಸಿ ತಪ್ಪು ಕಲ್ಪನೆಗಳಿಗೆ ತೆರೆ ಎರೆಯಲಾಯಿತು.

ಗಾಂಧೀಜಿಯವರು ಬೆಳಗಾವಿ ಅಧಿವೇಶನದಲ್ಲಿ ಮಾಡಿದ ಭಾಷಣ ಎಲ್ಲರ ಮನದಲ್ಲಿಯೂ ಸ್ಥಾನವನ್ನು ಪಡೆದುಕೊಂಡಿತು. 'ಅಸ್ಪೃಶ್ಯತೆಯನ್ನು ತೊಡೆದು ಹಾಕುವ ದೀಕ್ಷೆಯನ್ನು ಸವರ್ಣೀಯರು ಹಿಂದೂಧರ್ಮಕ್ಕಾಗಿ ಮತ್ತು ತಮಗಾಗಿ ತೊಡಬೇಕಾಗಿರುವುದು ಅನಿವಾರ್ಯವಾಗಿದೆ. ಜನರು ಸಹಿಷ್ಣುತೆ, ಸಮಾನತೆ, ಐಕ್ಯತೆಯನ್ನು ಪ್ರದರ್ಶಿಸಿದಾಗ ಮಾತ್ರ ಸ್ವರಾಜ್ಯ ಸಾಧ್ಯವಾಗುತ್ತದೆ'[6] ಎಂದು ಎತ್ತಿ ಹೇಳಿದ್ದು ಇಂದಿಗೂ ಸ್ಮರಣೀಯವಾಗಿದೆ.

ಬೆಳಗಾವಿಯಲ್ಲಿ ಕಾಂಗ್ರೆಸ್ ಅಧಿವೇಶನ ಜರುಗಿದ್ದು, ಕರ್ನಾಟಕದ ಪಾಲಿಗೆ ಅತ್ಯಂತ ಮಹತ್ವದಾಗಿದೆ. ಈ ಅಧಿವೇಶನದಲ್ಲಿ ಭಾಗವಹಿಸಿದವರಲ್ಲಿ ಪ್ರಮುಖರೆಂದರೆ ಜವಾಹರಲಾಲ ನೆಹರು, ಸರೋಜಿನಿ ನಾಯ್ಡು, ಸರ್ದಾರ ವಲ್ಲಭಾಯಿ ಪಟೇಲ, ಡಾ.ಬಾಬುರಾಜೇಂದ್ರ ಪ್ರಸಾದ, ನೇತಾಜಿ ಸುಭಾಷ ಚಂದ್ರ ಭೋಸ್ ಮೊದಲಾದವರು ಪಾಲ್ಗೊಂಡಿದ್ದರು. ಅಲ್ಲದೇ ಹುಯಿಲಗೋಳ ನಾರಾಯಣರಾವರ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಕರ್ನಾಟಕ ಏಕೀಕರಣದ ಗುರಿಯನ್ನು ಇಟ್ಟುಕೊಂಡು ಬರೆದ ಹಾಡನ್ನು ಹದಿನಾಲ್ಕು ವರ್ಷದ ಬಾಲಕಿಯಾಗಿದ್ದ ಗಂಗೂಬಾಯಿ ಹಾನಗಲ್ ಅವರು ಹಾಡಿ ಜನರ ಮನಗೆದ್ದರು. ಈ ಹಾಡಿನ ಮೂಲಕವೇ ಗಂಗೂಬಾಯಿಯವರು ಉದನೋನ್ಮುಖ ಸಂಗೀತಗಾರ್ತಿಯಾಗಿ ಹೊರಹೊಮ್ಮಲು ಸಾಧ್ಯವಾಯಿತು ಎಂದು ತಾವೇ ಸ್ವತಃ ತಮ್ಮ ಆತ್ಮಚರಿತ್ರೆಯಲ್ಲಿ ಹೇಳಿದ್ದಾರೆ. ಬೆಳಗಾವಿಯ ಜಾನಪದ ವಿದ್ವಾಂಸರೆಂದು ಹೆಸರಾದ ಬೆಟಗೇರಿ ಕೃಷ್ಣಶರ್ಮರ 'ಎನಿತು ಇನಿದು ಈ ಕನ್ನಡ ನುಡಿಯು' ಎಂಬ ಹಾಡು ಪ್ರಪ್ರಥಮವಾಗಿ ಹಾಡಲ್ಪಟ್ಟಿದ್ದು ಅವಿಸ್ಮರಣೀಯವಾಗಿದೆ. ತದನಂತರದಲ್ಲಿ ಬೆಳಗಾವಿಯು ಸಾಂಸ್ಕೃತಿಕವಾಗಿಯೂ ಸಾಹಿತ್ಯಿಕವಾಗಿಯೂ ಬೆಳಯತೊಡಗಿತು.

ಬೆಳಗಾವಿಯ ಅಧಿವೇಶನದ ನಂತರ ಕರ್ನಾಟಕದ ತುಂಬೆಲ್ಲಾ ಸ್ವಾತಂತ್ರ್ಯ ಚಳುವಳಿಯ ಹೋರಾಟ ಅಧಿಕವಾಗತೊಡಗಿತು. ಇದರ ಪರಿಣಾಮವಾಗಿ ಬೆಳಗಾವಿಯ ರಾಷ್ಟ್ರೀಯ ಮನ್ನಣೆ ಸಿಕ್ಕಿತು. ಮೊದಲೇ ಸ್ವಾತಂತ್ರ್ಯ ಹೋರಾಟಗಾರರ ನೆಲೆಯಾಗಿದ್ದ ಬೆಳಗಾವಿಗೆ ಅಧಿಕಶಕ್ತಿ ದೊರೆತಂತಾಯಿತು. ಎಲ್ಲಡೆ ರಾಷ್ಟ್ರಪ್ರೇಮ, ರಾಷ್ಟ್ರಾಭಿಮಾನ, ಕಾಯಕದ ಮೂಲಕ ಮುಂದುವರೆಯಿತು. ಬ್ರಿಟಿಷರ ಆಡಳಿತವನ್ನು ಬಿಟ್ಟು ಸ್ವತಃ ಉದ್ಯೋಗಕ್ಕೆ ಕೈ ಹಾಕತೊಡಗಿದರು. ವಸ್ತುಗಳನ್ನು ಮಧ್ಯೆ ಸಾಮಾಜಿಕ ಆಂದೋಲನ ಮಾಡುವ ಸಂದರ್ಭದಲ್ಲಿ ಗಾಂಧೀಜಿಯವರನ್ನು ಬಂಧಿಸಿ ಬೆಳಗಾವಿಯ ಹಿಂಡಲಗಾ ಜೈಲಿನಲ್ಲಿ ಬಂಧಿಸಿ ಇಟ್ಟಿದ್ದರು. ಅಂತಹ ಸಂದರ್ಭದಲ್ಲಿಯೂ ಗಾಂಧೀಜಿವರು ಅಸ್ಪೃಶ್ಯತಾ ನಿವಾರಣೆಯ ಆಂದೋಲನವನ್ನು ಕೈಗೆತ್ತಿಕೊಂಡಿದ್ದು ವಿಶೇಷವಾಗಿತ್ತು.

ಬೆಳಗಾವಿಯಲ್ಲಿ ನಡೆದ ಸ್ವಾತಂತ್ರ್ಯ ಹೋರಾಟ ಬರೀ ರಾಜಕೀಯವಾಗಿ ಇರಲಿಲ್ಲ. ಇದರಲ್ಲಿ ಮಠಗಳು, ಶೈಕ್ಷಣಿಕ ಸಂಸ್ಥೆಗಳು, ಪತ್ರಿಕೆಗಳು ವಿಶಿಷ್ಟ ಸಹಕಾರವನ್ನು ನೀಡಿದ್ದು ಕೂಡ ಮಹತ್ವದಾಗಿದೆ. ಅವರ ಈ ಸೇವೆಯಿಂದ ಚಳುವಳಿಯ ಜೊತೆಗೆ ಜ್ಞಾನದ ಅರಿವು ಕೂಡ ಸಿಕ್ಕಂತಾಯಿತು. ಬೆಳಗಾವಿಯ ಕೆ.ಎಲ್.ಇ. ಸಂಸ್ಥೆ, ನಾಗನೂರು ರುದ್ರಾಕ್ಷಿಮಠ, ತರುಣ ಭಾರತ, ಸಂಯುಕ್ತ ಕರ್ನಾಟಕ, ಅರುಣೋದಯ, ಕರ್ನಾಟಕ ವೃತ್ತದಂತಹ ಪತ್ರಿಕೆಗಳು, ಸಂಸ್ಥೆಗಳು ವಹಿಸಿದ ಪಾತ್ರ ಮರೆಯುವಂತಿಲ್ಲ.

ಒಂದು ಕಡೆ ಹೋರಾಟಗಳನ್ನು ಕೈ ಬಿಡದೇ ಜನರು ಸತ್ಯಾಗ್ರಹದಂತಹ ತೀವ್ರ ಹೋರಾಟ ನಡೆಯುತ್ತಿದ್ದರೆ, ಇಂತಹ ಬ್ರಿಟಿಷ ಸರ್ಕಾರದವರು ಹೋರಾಟಗಾರರನ್ನು ಬಂಧಿಸಿ ಜೈಲು ಸೇರಿಸುತ್ತಿದ್ದರು. ಅದಲ್ಲದೇ ಬೆಳಗಾವಿಯ ತುಂಬಾ ಮೆರವಣಿಗೆ, ಪ್ರಭಾತಫೇರಿ, ಸಭೆಯಂತಹ ಚಟುವಟಿಕೆಗಳು ನಡೆಯುತ್ತಿದ್ದವು. ಶಾಲಾ, ಕಾಲೇಜುಗಳನ್ನು ಮುಚ್ಚಿದರು. ಲಾಠಿ ಪ್ರಹಾರಗಳಾದವು. ಪೋಲೀಸರ ಗುಂಡಿಗೆ ಅಮಾಯಕರು ಬಲಿಯಾದರು. ಪ್ರತಿಯೊಬ್ಬರು ಸ್ವಾತಂತ್ರ್ಯಕೋಸ್ಕರ ಸಕ್ರಿಯವಾಗಿ ಪಾಲ್ಗೊಂಡು ಚಳುವಳಿಗಳನ್ನು ಜೀವಂತಗೊಳಿಸುತ್ತಿದ್ದರು.

1942ರ ಸೆಪ್ಟೆಂಬರ್ 15ರಂದು ನಾಲ್ಕು ರೇಲ್ವೆ ನಿಲ್ದಾಣಗಳನ್ನು ಸುಟ್ಟುಬೂದಿಮಾಡಿದರು. ಅಂಚೆಕಚೇರಿಗಳನ್ನು ಸುಡಲಾಯಿತು. ಕಾಗದ ಪತ್ರಗಳನ್ನು ಸುಟ್ಟುಹಾಕಿದರು. ಪೋಲಿಸ್ ಚೌಕಿಗಳ ಮೇಲೆ ದಾಳಿ ನಡೆಯಿತು. ಜಿಲ್ಲೆ ಜಿಲ್ಲೆಗಳಲ್ಲಿಯೂ ಅನಾಹುತಗಳು ಚಳುವಳಿಗಾರರಿಂದ ಸಂಭವಿಸ ತೊಡಗಿದವು. ಇಂತಹ ಸಂದರ್ಭದಲ್ಲಿ ಬೆಳಗಾವಿಯ ಜನರು ಸ್ವಯಂ ಪ್ರೇರಣೆಯಿಂದ ಧನಸಹಾಯ ಮಾಡಲು ಮುಂದಾದರು. ಅವರಲ್ಲಿ ಶ್ರೀಮಂತರು, ವರ್ತಕರು, ಸದಾಶಿವ ಪರಾಂಜಪೆ, ಜಯದೇವ ಕುಲಕರ್ಣಿ, ಪುರುಷೋತ್ತಮ ತೊಂಡುಲಕರ, ಕೆ.ವಿ.ಪಾಟಣಕರ, ಸುಶೀಲಾ ಕುಲಕರ್ಣಿ, ಎಮ್.ಎಸ್.ಕುಲಕರ್ಣಿ, ವಿಷ್ಣು ಪುರಾಣಿಕರಂತಹ ಹಲವಾರು ಗಣ್ಯವ್ಯಕ್ತಿಗಳು ಹಾಗೂ ಚಳುವಳಿಯ ಸಂದರ್ಭದಲ್ಲಿ ಮಹಿಳೆಯರು ತಮ್ಮ ಮೈಮೇಲೆ ಇದ್ದ ಬಂಗಾರದ ವಸ್ತುಗಳನ್ನು ಕೂಡ ನೀಡಿದ್ದು ಕಂಡುಬರುತ್ತದೆ. ಇದೇ ನಿಜವಾದ ರಾಷ್ಟ್ರಾಭಿಮಾನ. ಇದು 1947 ಅಗಸ್ಟ್ 15ರವರೆಗೆ ಈ ಚಳುವಳಿ ಹೋರಾಟಗಳು ರಾತ್ರಿ–ಹಗಲೆನ್ನಂದೆ ನಡೆಯುತ್ತಿತ್ತು.

ಭಾರತದ ಸ್ವಾತಂತ್ರ್ಯ ಸಮರದಲ್ಲಿ ಬೆಳಗಾವಿ ಪ್ರದೇಶದ ಪಾತ್ರ ಅಗ್ರಮಾನ್ಯವಾಗಿದೆ. ಕಿತ್ತೂರ ನಾಡಿನ ವೀರರಾಣಿ ಚನ್ನಮ್ಮ ಬ್ರಿಟಿಷರ ವಿರುದ್ಧ ಬಂಡಾಯ ಸಾರಿದ್ದು ಅವಿಸ್ಮರಣೀಯ ಘಟನೆಯನ್ನು ಮರೆಯುವಂತಹದಲ್ಲ. 1916ರಲ್ಲಿ ಸ್ಥಾಪನೆಯಾದ ಹೋ ರೂಲ ಲೀಗ ಬೆಳಗಾವಿ, ನಿಪ್ಪಾಣಿ, ಸಂಕೇಶ್ವರಗಳಂತಹ ಊರುಗಳಲ್ಲಿ ಶಾಖೆಗಳನ್ನೆ ತೆರೆಯಿಸಿತು. ಉಪ್ಪಿನ ಸತ್ಯಾಗ್ರಹ, ಅರಣ್ಯ ಸತ್ಯಾಗ್ರಹ, ಈಚಲ ಮರ ಕಡಿಯುವ ಸತ್ಯಾಗ್ರಹಗಳು ಈ ಪ್ರದೇಶದಲ್ಲಿ ತೀವ್ರ ಸ್ವರೂಪವನ್ನೇ ತಾಳಿತು. 1942ರಲ್ಲಿ ನಡೆದ ಚಲೇಜಾವ ಚಳುವಳಿಯಲ್ಲಂತೂ ಈ ಪ್ರದೇಶದ ಕೊಡುಗೆ ಅಪಾರವಾಗಿದೆ. ಸ್ವಾತಂತ್ರ್ಯ ಚಳುವಳಿಯಿಂದಾಗಿ ಮಹಾನ ನಾಯಕರು ಸೆರೆಮನೆವಾಸ ಅನುಭವಿಸಿದರು. ಹಲವರು ಪೋಲಿಸರ ಗುಂಡಿನ ಏಟಿಗೆ ಬಲಿಯಾದರು. ಸಾವು–ನೋವುಗಳು ಸಂಭವಿಸಿದವು. ಪ್ರತಿ ಮನೆ ಮನೆಯಲ್ಲೂ ಹೋರಾಟ ಕಣವಾಗಿ ಪರಿಣಮಿಸಿತು. ರಾಜಕೀಯವಾಗಿ, ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಧಾರ್ಮಿಕವಾಗಿ, ಸಾಹಿತಿಕವಾಗಿಯೂ ಬೆಳಗಾವಿ ಬಲವಾಗ ತೊಡಗಿತು. ಸಾಹಿತ್ಯದ ಮೂಲಕ ಬೆಳಗಾವಿ ಜಿಲ್ಲೆ ಕನ್ನಡ

ಸಾಹಿತ್ಯದಲ್ಲಿ ಇಂದಿಗೂ ಅಜರಾಮರವಾಗಿ ಉಳಿದುಕೊಳ್ಳಲು ಸಾಧ್ಯವಾಯಿತು. ಇದೆಲ್ಲರ ಪ್ರತಿಫಲವಾಗಿ ಭಾರತದ ಸ್ವಾತಂತ್ರ್ಯ ಸಮರವು ಒಂದು ಮಹಾಅಗ್ನಿ ಕುಂಡವಾಗಿ ಪರಿಣಮಿಸಿತು. ಇದರ ಪರಿಣಾಮವೇ 1947 ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು. ಎಲ್ಲರ ಕನಸಿಗೆ ಮನೆ ಮನದಲ್ಲಿಯೂ ಬೆಳಕು ರಾರಾಜಿಸುತ್ತಿತ್ತು. ಚಳುವಳಿಯಲ್ಲಿ ಪ್ರಾಣ ತೆತ್ತ ಆತ್ಮಗಳಿಗೆ ನೆಮ್ಮದಿಯ ಶಾಂತಿ ದೊರೆಯಿತು. ಇವೆಲ್ಲ ಅಂಶಗಳನ್ನು ಅರಿತಾದ ಸ್ವಾತಂತ್ರ್ಯ ಚಳುವಳಿಯಲ್ಲಿ ಬೆಳಗಾವಿ ಜಿಲ್ಲೆಯ ಪಾತ್ರ ಮಹತ್ವದಾಗಿದೆ ಎಂದರೆ ತಪ್ಪಾಗಲಾರದು. 'ಸ್ವಾತಂತ್ರ್ಯವೆಂಬುದು ಪುಸ್ತಕ, ಗ್ರಂಥಗಳಲ್ಲಿ ಅಷ್ಟೇ ಬರದಿಡಬೇಕೆಂದಿಲ್ಲ ಅದು ಮನುಷ್ಯನ ಮನದಾಳದಲ್ಲಿ ಹುಟ್ಟುವ ರಾಷ್ಟಾಭಿಮಾನವೆಂಬ ಕಿಡಿಯಾಗಿರಬೇಕೆಂಬುದು ನನ್ನ ಆಸೆ ನನ್ನ ಕನಸು'...

**ಅಡಿ ಟಿಪ್ಪಣಿಗಳು**

1. ಸೂರ್ಯನಾಥ ಕಾಮತ. (2002). *ಬೆಳಗಾವಿ ಜಿಲ್ಲೆಯಲ್ಲಿ ಸ್ವಾತಂತ್ರ್ಯ ಹೋರಾಟ.* ಇಲ್ಲಿ., ಬೆಳಗಾವಿ ಜಿಲ್ಲೆಯ ಭವ್ಯ ಪರಂಪರೆ. ವಿ.ಸಿ. ಮಾಲಗತ್ತಿ. (ಸಂ.). ಪು.ಸಂ.120,
2. ಅದೇ.
3. ರವೀಂದ್ರ ವಿ ಚಿಕ್ಕಮಠ. (2012). ಬೆಳಗಾವಿ ಸಾಂಸ್ಕೃತಿಕ ಅಧ್ಯಯನ. ಗೌರವಿಸು ಪ್ರಕಾಶನ, ಬೆಳಗಾವಿ. ಪು.ಸಂ.54
4. ಅದೇ. ಪು.ಸಂ. 55.
5. ಅದೇ. ಪು.ಸಂ 63.
6. ಅದೇ. ಪು.ಸಂ 67.

**ಪರಾಮರ್ಶನ ಗ್ರಂಥಗಳು**


- ರವೀಂದ್ರ ವಿ ಚಿಕ್ಕಮಠ. (2012). ಬೆಳಗಾವಿ ಸಾಂಸ್ಕೃತಿಕ ಅಧ್ಯಯನ. ಗೌರವಿಸು ಪ್ರಕಾಶನ, ಬೆಳಗಾವಿ.
- ಸೂರ್ಯನಾಥ ಕಾಮತ. (2002). ಬೆಳಗಾವಿ ಜಿಲ್ಲೆಯ ಸಂಗ್ರಾಮ. ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು ಸಂಪುಟ–3, ಕನ್ನಡ ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
- ರಾಜಶೇಖರ ಇಚ್ಚಂಗಿ. (2012). ಬೆಳಗಾವಿ ಜಿಲ್ಲೆ ಸಾಂಸ್ಕೃತಿಕ ವೈವಿಧ್ಯ. ನಿವೇದಿತ ಪ್ರಕಾಶನ, ಬೆಂಗಳೂರು.
- ಸಿದ್ಧರಾಮ ಸ್ವಾಮೀಜಿ. (2013). ಬೆಳಗಾವಿ ಬೆಳಗು–ಅಭಿನಂದನ. ಶ್ರೀ ಕಾರಂಜಿಮಠ ಪ್ರಕಾಶನ, ಬೆಳಗಾವಿ.
- ಗುಂಜಾಳ ಎಸ್.ಆರ್. (2003). ಬೆಳಗಾವಿ ಬೆಳಕು – ಸಂಸ್ಮರಣ ಸಂಪುಟ. ಅಖಿಲ ಭಾರತ 70ನೇ ಕನ್ನಡ ಸಾಹಿತ್ಯ ಸಮ್ಮೇಳನ, ಬೆಳಗಾವಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
- ಕೆಂಪಣ್ಣವರ ಪಿ.ಜಿ. (2004). ಬೆಳಗಾವಿ ಜಿಲ್ಲೆಯ ಸಾಹಿತ್ಯ ದರ್ಶನ. ಕನ್ನಡ ಜಾಗೃತಿ ಪುಸ್ತಕ ಮಾಲೆ, ಬೆಳಗಾವಿ.